ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿ/ಶೈಶಾ-04/ ಸು-11/2016-17 ದಿನಾಂಕ:19-11-2016

ಸುತ್ತೋಲೆ

ವಿಷಯ: ರಾಜ್ಯದ ಬರಪರಸ್ಥಿತಿ ಹಿನ್ನಲೆಯಲ್ಲಿ ರೈತರಿಗೆ ಪರಿಹಾರ ನೀಡುವ ಭಾಗವಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಶಿಕ್ಷಣ ಶುಲ್ಕ ಪರಿಹಾರ ನೀಡುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: 227 ಮಾಹಿತಿ ದಿನಾಂಕ: 13-11-2015.

2. ಸಾರ್ವಜನಿಕ ಶಿಕ್ಷಣ ಇಲಾಖೆಯ ಕಛೇರಿ ಜ್ಞಾಪನ ದಿನಾಂಕ; 20-02-2016 ಮತ್ತು ನೆನಪೋಲೆ ದಿನಾಂಕ: 11-07-2016.

3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರವರ ಪತ್ರ ಸಂಖ್ಯೆ: ಪ್ರಕಾ/ಪ್ರಾ &ಪ್ರೌ/ಪರಿಹಾರ/96/2016.ದಿನಾಂಕ: 19-11-2016

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿನ ರೈತರು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಹಂತದವರಿಗೆ ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗುವಂತೆ ಉಚಿತ ಶಿಕ್ಷಣ, ಹಾಸ್ಟಲ್ ಸೌಲಭ್ಯ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚವನ್ನು ಪಾವತಿ ಮಾಡುವಂತೆ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಆದೇಶಿಸಲಾಗಿದೆ. ಸದರಿ ಪತ್ರದನ್ವಯ ಉಲ್ಲೇಖ 02ರ ಜ್ಞಾಪನ ಹಾಗೂ ನೆನಪೋಲೆಗಳ ನಿಗಧಿತ ನಮೂನೆಯಲ್ಲಿ ಮಾಹಿತಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಬರಪರಿಸ್ಥಿತಿ ಹಿನ್ನೆಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಪದವಿ ಪೂರ್ವ ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗುವಂತೆ ಉಚಿತ ಶಿಕ್ಷಣ ಅಥವಾ ತತ್ಸಮಾನ ಶಿಕ್ಷಣ ಶುಲ್ಕ ವೆಚ್ಚವನ್ನು ಪರಿಹಾರ ರೂಪದಲ್ಲಿ ಪಾವತಿಸಬೇಕಾಗಿದೆ.

**ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗಲು ಶಿಕ್ಷಣ ಶುಲ್ಕ ಮತ್ತು ವಸತಿನಿಲಯ ವೆಚ್ಚವನ್ನು ಪಾವತಿಸುವ ಸಂಬಂಧ ಅನುಸರಿಸಬೇಕಾದ ಮಾನದಂಡಗಳು/ ಮಾರ್ಗಸೂಚಿ**

ಅ. **ಯೋಜನೆಯ ಹೆಸರು:-** ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗಲು ಶೈಕ್ಷಣಿಕ ಖರ್ಚುವೆಚ್ಚದ ಪರಿಹಾರ ನೀಡುವುದು.

ಆ. **ಫಲಾನುಭವಿಗಳು ಮತ್ತು ಯೋಜನೆಯ ವ್ಯಾಪ್ತಿ:-** ಫಲಾನುಭವಿಗಳು ಎಂದರೆ ರಾಜ್ಯದ ಆತ್ಮಹತ್ಯೆಗೆ ತುತ್ತಾದ ರೈತರ ಅವಲಂಬಿತ ಕುಟುಂಬದ ಸದಸ್ಯರಲ್ಲಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ.

ಇ. **ಯೋಜನೆಯ ವಿನ್ಯಾಸ:-** ಈ ಯೋಜನೆಯನ್ನು ರಾಜ್ಯದ ಆತ್ಮಹತ್ಯೆಗೆ ತುತ್ತಾದ ರೈತರ ಅವಲಂಬಿತ ಮಕ್ಕಳು ಕಾಲೇಜು ಶಿಕ್ಷಣವನ್ನು ಮುಂದುವರೆಸಲು ಅನುಕೂಲವಾಗಲು ಅವರಿಗೆ ಪರಿಹಾರ ರೂಪದಲ್ಲಿ ಶಿಕ್ಷಣ ಶುಲ್ಕ ವೆಚ್ಚವನ್ನು ವಾರ್ಷಿಕವಾಗಿ ನೀಡುವುದು.

ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಶುಲ್ಕ ಮರುಪಾವತಿ ಮಾಡತಕ್ಕದ್ದು.

1) ಈ ಯೋಜನೆಯು ದಿನಾಂಕ: 01-04-2015ರ ನಂತರ ಆತ್ಮಹತ್ಯೆ ಮಾಡಿಕೊಂಡ ಎಲ್ಲಾ ರೈತರ ಕುಟುಂಬಕ್ಕೆ ಅನ್ವಯಿಸುತ್ತದೆ.

2) ಶುಲ್ಕ ಮರುಪಾವತಿಯನ್ನು 2016-17ನೇ ಶೈಕ್ಷಣಿಕ ವರ್ಷಕ್ಕೆ ಮಾಡಲಾಗುವುದು.

3) ರೈತ ಆತ್ಮಹತ್ಯೆ ಮಾಡಿಕೊಂಡ ಸಂದರ್ಭದಲ್ಲಿ ಸಾಲದ ಹೊರೆ ಆತ್ಮಹತ್ಯೆಗೆ ಕಾರಣವೆಂಬ ವಿಷಯವನ್ನು ಪ್ರತಿ ವಿಭಾಗ ಮಟ್ಟದಲ್ಲಿ ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯು ದೃಢೀಕರಿಸಿರುವ ದಾಖಲೆಯನ್ನು ಸಲ್ಲಿಸುವುದು.

4) ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳಿಗೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ರೈತರ ಆತ್ಮಹತ್ಯೆ ಮರಣದ ನಂತರ ಪರಿಹಾರ ನೀಡುವ ಸಂದರ್ಭದಲ್ಲಿ ಸದರಿಯವರ ಕುಟುಂಬಕ್ಕೆ ನೀಡಲಾಗಿರುವ ಪರಿಹಾರ ಮಂಜೂರಾತಿ ಪತ್ರವನ್ನು ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.

5) ಈ ಸುತ್ತೋಲೆಗೆ ಲಗತ್ತಿಸಿರುವ ಅನುಬಂಧ-1 ರಲ್ಲಿರುವ ನಮೂನೆಯಂತೆ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರಿಂದ ಪಡೆಯುವುದು.

6) ಗುರುತಿನ ಪುರಾವೆಗಾಗಿ ಇತರೆ ಯಾವುದೇ ದಾಖಲೆಗಳು- ಅಂದರೆ ವಿದ್ಯಾರ್ಥಿಯ ಗುರುತಿನ ಚೀಟಿ (ಐಡಿ) ಅಥವಾ ಪೋಷಕರ ಮತ್ತು ವಿದ್ಯಾರ್ಥಿಯ ಸಂಬಂಧವನ್ನು ದೃಢೀಕರಿಸುವ ದಾಖಲೆಯನ್ನು ಆಯಾ ಕಾಲೇಜು ಮುಖ್ಯಸ್ಥರು ದೃಢೀಕರಣ ಮಾಡಿ ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಸಲ್ಲಿಸುವುದು.

7) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಂದ ಕಾಲೇಜು ಮುಖ್ಯಸ್ಥರು ಶಿಕ್ಷಣಕ್ಕಾಗಿ ಯಾವುದೇ ಶುಲ್ಕವನ್ನು ವಸೂಲು ಮಾಡುವಂತಿಲ್ಲ. ಈ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇರುತ್ತದೆ. ಈ ಅಂಶವನ್ನು ಆಯಾ ಕಾಲೇಜು ಮುಖ್ಯಸ್ಥರು ಖಾತ್ರಿಪಡಿಸತಕ್ಕದ್ದು.

8) ವಿದ್ಯಾರ್ಥಿಯು ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದರೂ ಸಹ ಇವರಿಗೂ ಪರೀಕ್ಷಾ ಶುಲ್ಕದಿಂದ ವಿನಾಯಿತಿ ಇರುತ್ತದೆ. ಈ ಅಂಶವನ್ನು ಆಯಾ ಜಿಲ್ಲೆಯ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಜಂಟಿ ನಿರ್ದೇಶಕರು (ಪರೀಕ್ಷೆ) ಇವರಿಗೆ ವರದಿ ಮಾಡತಕ್ಕದ್ದು.

9) ಇಂತಹ ವಿದ್ಯಾರ್ಥಿಯು ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ಪಾವತಿಸಲಾದ ಬೋಧನಾ ಶುಲ್ಕವನ್ನು ವಿದ್ಯಾರ್ಥಿಗೆ ಮರುಪಾವತಿಸತಕ್ಕದ್ದು. ಈ ಉದ್ದೇಶಕ್ಕಾಗಿ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಕಾಲೇಜಿನಲ್ಲಿ ಬೋಧನಾ ಶುಲ್ಕ ಪಾವತಿಸಿದ ಬಗ್ಗೆ ಮೂಲ ರಶೀದಿಯನ್ನು

ಪಡೆದು, ಪರಿಶೀಲಿಸಿ ಆ ವಿದ್ಯಾರ್ಥಿಯ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಮೊತ್ತವನ್ನು ಮರು ಪಾವತಿಸತಕ್ಕದ್ದು. ವಾರ್ಷಿಕ ರೂ 30,000/- ಅಥವಾ ನೈಜವಾಗಿ ಪಾವತಿಸಲ್ಪಡುವ ವಾರ್ಷಿಕ ಶುಲ್ಕ ಈ ಎರಡರಲ್ಲಿ ಯಾವುದು ಕಡಿಮೆ ಮೊತ್ತವಾಗಿರುತ್ತದೊ ಆ ಮೊತ್ತವನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಆ ವಿದ್ಯಾರ್ಥಿಗೆ ಶುಲ್ಕ ಮರುಪಾವತಿ ಮಾಡುತ್ತಾರೆ. ಈ ಮೊತ್ತವನ್ನು ಇ-ವರ್ಗಾವಣೆ ಅಥವಾ ಕ್ರಾಸ್ಡ್ ಚೆಕ್ ಮೂಲಕ ವಿದ್ಯಾರ್ಥಿ ಖಾತೆಗೆ ಸಂದಾಯ ಮಾಡತಕ್ಕದ್ದು.

10) ವಿದ್ಯಾರ್ಥಿಯು ಪ್ರಸ್ತುತ ವ್ಯಾಸಂಗ ಮಾಡುತ್ತಿರುವ ಜಿಲ್ಲೆಯ ಜಿಲ್ಲಾ ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರು ಶುಲ್ಕ ಮರುಪಾವತಿ ಜವಾಬ್ದಾರಿಯನ್ನು ಹೊಂದಿರುತ್ತಾರೆ (ರೈತರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಮಂಜೂರಾತಿ ಪತ್ರವನ್ನು ಯಾವುದೇ ಜಿಲ್ಲೆಯಲ್ಲಿ ವಿತರಿಸಿದ್ದರೂ ಅದನ್ನು ಪರಿಗಣಿಸತಕ್ಕದ್ದು).

11) ಮೇಲ್ಕಂಡ ಎಲ್ಲಾ ಪೂರಕ ಮಾಹಿತಿಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದೃಢೀಕರಿಸಿ, ಕೂಲಂಕಷವಾಗಿ ಪರಿಶೀಲಿಸಿ ಖಾತ್ರಿ ಪಡಿಸಿಕೊಂಡು ನಿಯಮಾನುಸಾರ ಪರಿಹಾರವನ್ನು ಫಲಾನುಭವಿ ಮಕ್ಕಳ ಖಾತೆಗೆ ಜಮಾ ಮಾಡಲು ಕ್ರಮ ವಹಿಸುವುದು.

19/11/16

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

ಮುಂದಿನ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲಾ ಮಾನ್ಯ ಜಿಲ್ಲಾಧಿಕಾರಿಗಳು ಹಾಗು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ
4. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
5. ಕಛೇರಿ ಪ್ರತಿ

# ಅನುಬಂಧ–1

## ಜಿಲ್ಲಾ ಉಪನಿರ್ದೇಶಕರು ಈ ಕೆಳಗಿನ ನಮೂನೆಯಲ್ಲಿ ಸಂಗ್ರಹಿಸ ಬೇಕಾದ ಮಾಹಿತಿ:-

| ಕ್ರಮ ಸಂಖ್ಯೆ | ಅತ್ಮಹತ್ಯೆ ಮಾಡಿಕೊಂಡ ರೈತನ ಹೆಸರು | ಸ್ಥಳ/ ಗ್ರಾಮ/ ತಾಲ್ಲೂಕು /ಜಿಲ್ಲೆ | ಮರಣ ಹೊಂದಿದ ದಿನಾಂಕ | ಪರಿಹಾರ ಮೊತ್ತವನ್ನು ಮಂಜೂರು ಮಾಡಿದ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರ ಆದೇಶ ಸಂಖ್ಯೆ | 11&12ನೇ ತರಗತಿಯವರಿಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹೆಸರುಗಳು | ವಿದ್ಯಾರ್ಥಿಯ ತರಗತಿ | ಕಾಲೇಜು ಹೆಸರು ಮತ್ತು ಸ್ಥಳ | ಕಾಲೇಜು ಆಡಳಿತ ಮಂಡಳಿಯ ವಿಧ | ವಾರ್ಷಿಕ ಬೋಧನ ಶುಲ್ಕ (ರೂ) | ವಸತಿಯುತ ಕಾಲೇಜನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಾರ್ಷಿಕ ವಸತಿನಿಲಯ ವೆಚ್ಚ (ರೂ) | ಮರುಪಾವತಿ ಮೊತ್ತ |
|---|---|---|---|---|---|---|---|---|---|---|---|
| | | | | | | | | | | | |

1) ದಿನಾಂಕ 01–04–2015 ಅಥವಾ ನಂತರ ಅತ್ಮಹತ್ಯೆ ಮಾಡಿಕೊಂಡ ರೈತರ ಪಟ್ಟಿಯನ್ನು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರವರು ಆಯಾ ಜಿಲ್ಲೆಯ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರಿಂದ ಮೇಲಿನ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು.
2) ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಂತಹ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಯಾವುದೇ ಶುಲ್ಕವನ್ನು ಸಂಗ್ರಹಿಸದಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
3) ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ
   1) ವಾರ್ಷಿಕ ರೂ 30,000/– ಅಥವಾ ನೈಜವಾಗಿ ಪಾವತಿಸಲ್ಪಡುವ ವಾರ್ಷಿಕ ಬೋಧನಾ ಶುಲ್ಕ ಈ ಎರಡರಲ್ಲಿ ಯಾವುದು ಕಡಿಮೆ ಮೊತ್ತವಾಗಿರುತ್ತದೊ ಆ ಮೊತ್ತವನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಆ ವಿದ್ಯಾರ್ಥಿಗೆ ಶುಲ್ಕ ಮರುಪಾವತಿ ಮಾಡುತ್ತಾರೆ.

ಕ್ರಮ ಸಂಖ್ಯೆ 2 & 3ರಲ್ಲಿ ಸೂಚಿಸಿರುವಂತೆ ನಿಖರವಾದ ದಾಖಲೆಗಳನ್ನು ಹಾಜರುಪಡಿಸಿದ ತರುವಾಯ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ಖಾಸಗಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕ್ರಾಸ್ಡ್ ಚೆಕ್ ಅಥವಾ ಅರ್‌ಟಿಜಿಎಸ್ (ಬ್ಯಾಂಕ್ ಖಾತೆಗೆ) ಮೂಲಕ ಪಾವತಿಸುವುದು.

ಪರೀಕ್ಷಾ ಶುಲ್ಕ ಪಾವತಿಯ ವಿನಾಯತಿ ನೀಡಬೇಕಿರುವ ವಿದ್ಯಾರ್ಥಿಗಳ ವಿವರ ಕುರಿತ ವರದಿಯನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ಕಡ್ಡಾಯವಾಗಿ ಸಲ್ಲಿಸುವುದು.

ಮಾಸಿಕ ವರದಿಯನ್ನು ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ನಂತರದ ತಿಂಗಳಿನ ಪ್ರತಿ 05ನೇ ತಾರೀಖಿನೊಳಗೆ ಸಲ್ಲಿಸುವುದು.

19/10/16

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ